# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಸೃಜಿಸಿ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಹೊಸ ತಾಲ್ಲೂಕು ಪಂಚಾಯತಿಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಸರ್ಕಾರದ ಆದೇಶ ಸಂಖ್ಯೆ: ಆಇ 136 ವೆಚ್ಚ 6/2020(ಇ) ದಿನಾಂಕ:20.5.2020
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ: ಗ್ರಾಅಪ 197 ಜಿಪಸ 2020 (ಇ-ಆಫೀಸ್)

**ಪ್ರಸ್ತಾವನೆ:**

ರಾಜ್ಯದಲ್ಲಿ 50 ಹೊಸ ತಾಲ್ಲೂಕುಗಳನ್ನು ಸೃಜಿಸಲಾಗಿದ್ದು ಅದಕ್ಕೆದುರಾಗಿ ತಾಲ್ಲೂಕು ಪಂಚಾಯತಿಗಳನ್ನು ಸೃಜಿಸಲು ರಾಜ್ಯಪತ್ರವನ್ನು ಹೊರಡಿಸಿದೆ. ಹೊಸದಾಗಿ ಸೃಜಿಸಲಾಗಿರುವ ತಾಲ್ಲೂಕು ಪಂಚಾಯತಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು ಪ್ರಸ್ತುತ 10 ತಾಲ್ಲೂಕು ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿರುತ್ತದೆ. 10 ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳೆದ 8-10 ತಿಂಗಳಿಂದ ವೇತನವನ್ನು ಸೆಳೆಯಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸುತ್ತಾ ಕೆಳಕಂಡಂತೆ ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತಾವಿಸಿದೆ.

(ರೂ.ಗಳಲ್ಲಿ)

| ಕ್ರ.ಸಂ. | ಜಿಲ್ಲೆ | ನೂತನ ತಾ.ಪಂ. | 2019-20ರವರೆಗೆ ವೇತನ ವೆಚ್ಚಕ್ಕಾಗಿ ಅಗತ್ಯವಿದ್ದ ಅನುದಾನ | 2020-21ನೇ ಸಾಲಿಗೆ ವೇತನಕ್ಕಾಗಿ ಅಗತ್ಯವಿರುವ ಅನುದಾನ<br>ಒಟ್ಟು | ಈಗಾಗಲೇ ಮಾರ್ಚ್ 2020 ರಿಂದ ಮೇ 2020ರವರೆಗೆ ಬಿಡುಗಡೆಗೊಳಿಸಿರುವ ಅನುದಾನ | ದಿನಾಂಕ:20.5.2020ರಂದು ಬಿಡುಗಡೆಗೊಳಿಸಿದ ಅನುದಾನ (ಬಾಕಿ ವೇತನ +2020-21ರಲ್ಲಿ ಮೂರು ತಿಂಗಳ ವೇತನಕ್ಕಾಗಿ | ಜೂನ್ 2020 ರಿಂದ ಫೆಬ್ರವರಿ 2021ರವರೆಗಿನ ವೇತನ ವೆಚ್ಚಕ್ಕಾಗಿ ಈಗ ಬಿಡುಗಡೆಗೊಳಿಸಿದ ಅನುದಾನ | ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಿದ ಅನದಾನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಕೋಲಾರ | ಕೆ.ಜಿ.ಎಫ್. | 565074.00 | 753432.00 | 188358.00 | 753432.00 | 565074.00 | 565074.00 |
| 2 | ಬೆಳಗಾವಿ | ಕಿತ್ತೂರು | 376716.00 | 753432.00 | 188358.00 | 565074.00 | 565074.00 | 1130148.00 |
| 3 | ಬೆಳಗಾವಿ | ಕಾಗವಾಡ | 439502.00 | 753432.00 | 188358.00 | 627860.00 | 565074.00 | |
| 4 | ಕಲಬುರ್ಗಿ | ಕಮಲಾಪುರ | 502288.00 | 753432.00 | 188358.00 | 690646.00 | 565074.00 | 1130148.00 |
| 5 | ಕಲಬುರ್ಗಿ | ಶಹಬಾದ್ | 502288.00 | 753432.00 | 188358.00 | 690646.00 | 565074.00 | |
| 6 | ಉಡುಪಿ | ಬೈಂದೂರು | 502288.00 | 753432.00 | 188358.00 | 690646.00 | 565074.00 | 565074.00 |
| 7 | ದಕ್ಷಿಣ ಕನ್ನಡ | ಮೂಡಬಿದರೆ | 502288.00 | 753432.00 | 188358.00 | 690646.00 | 565074.00 | 565074.00 |
| 8 | ಚಿಕ್ಕಮಗಳೂರು | ಅಜ್ಜಂಪುರ | 439502.00 | 753432.00 | 188358.00 | 627860.00 | 565074.00 | 565074.00 |
| 9 | ಹಾವೇರಿ | ರಟ್ಟೆಹಳ್ಳಿ | 439502.00 | 753432.00 | 188358.00 | 627860.00 | 565074.00 | 565074.00 |
| 10 | ರಾಯಚೂರು | ಮಸ್ಕಿ | 188358.00 | 753432.00 | 188358.00 | 376716.00 | 565074.00 | 565074.00 |
| | | | 4457806.00 | 7534320.00 | 1883580.00 | 6341386.00 | 5650740.00 | 5650740.00 |
| | (-) | ಕೆ.ಜಿ.ಎಫ್ | 565074.00 | 753432.00 | 188358.00 | 753432.00 | 565074.00 | 565074.00 |
| | | **ನಿವ್ವಳ** | **3892732.00** | **6780888.00** | **1695222.00** | **5587954.00** | **5085666.00** | **5085666.00** |

ಮೇಲ್ಕಂಡಂತೆ ಒಟ್ಟು ರೂ.5650740-00ಗಳನ್ನು ಹೆಚ್ಚುವರಿ ಒದಗಿಸಿ ಬಿಡುಗಡೆಗೊಳಿಸಲು ಪ್ರಸ್ತಾವಿಸಿದ್ದು ಕೆ.ಜಿ.ಎಸ್. ತಾಲ್ಲೂಕು ಪಂಚಾಯತಿ ಈಗಾಗಲೇ ತಾಲ್ಲೂಕು ಪಂಚಾಯತಿ ನಿಧಿ ಲೆಕ್ಕವನ್ನು ಹೊಂದಿದ್ದರಿಂದ ವೇತನಾಂಶಕ್ಕೆ ಈಗಾಗಲೇ ಆಯವ್ಯಯ ಒದಗಿಸಿರುವ ಅನದಾನವನ್ನು ಮರು

ಹಂಚಿಕೆಗೊಳಿಸಿ ಬಿಡುಗಡೆಗೊಳಿಸಲಾಗಿದೆ. ಕೆ.ಜಿ.ಎಫ್.ಗೆ ಬಿಡುಗಡೆಗೊಳಿಸಿರುವುದರಿಂದ ಅದಕ್ಕೆ ಪ್ರಸ್ತಾವಿಸಿರುವ ಅನುದಾನವನ್ನು ಕಳೆದು ನಿವ್ವಳ ರೂ.50,85,666.00ಗಳನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸುವಂತೆ ಮೇಲೆ (3)ರಲ್ಲಿ ಓದಲಾದ ಕಡತದಲ್ಲಿ ಪ್ರಸ್ತಾಪಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲ್ಕಂಡ ತಾಲ್ಲೂಕು ಪಂಚಾಯತಿಗಳಲ್ಲಿ ಕೆ.ಜಿ.ಎಫ್. ಅನ್ನು ಹೊರತುಪಡಿಸಿ ಇತರೆ ಒಂಬತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಅಧಿಕಾರಿಗಳ ಜೂನ್ 2020 ರಿಂದ ಫೆಬ್ರವರಿ 2021ರವರೆಗಿನ ವೇತನಕ್ಕಾಗಿ ರೂ.50,85,666.00ಗಳನ್ನು ಲೆಕ್ಕ ಶೀರ್ಷಿಕೆ 2515-00-196-1-05-300ರಿಂದ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 136 ವೆಚ್ಚ 6/2020(ಇ-ಆಫೀಸ್) ದಿನಾಂಕ: 6ನೇ ಜನವರಿ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅನುಬಂಧದ ಕಾಲಂ 3ರ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಫೆಬ್ರವರಿ 2021ರವರೆಗಿನ ವೇತನ ವೆಚ್ಚಕ್ಕಾಗಿ ಕಾಲಂ 8ರನ್ವಯ ಕಾಲಂ 9ರಂತೆ ನಮೂದಿಸಿರುವ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.50,85,666.00 (ರೂಪಾಯಿ ಐವತ್ತು ಲಕ್ಷದ ಎಂಬತ್ತೈದು ಸಾವಿರದ ಆರು ನೂರ ಅರವತ್ತಾರು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

Uploaded order No. 1415599010/7-1-21 (ರೂ.ಗಳಲ್ಲಿ)

| ಕ್ರ.ಸಂ. | ಜಿಲ್ಲೆ | ನೂತನ ತಾ.ಪಂ. | 2019-20ರವರೆಗೆ ವೇತನ ವೆಚ್ಚಕ್ಕಾಗಿ ಅಗತ್ಯವಿದ್ದ ಅನುದಾನ | 2020-21ನೇ ಸಾಲಿಗೆ ವೇತನಕ್ಕಾಗಿ ಅಗತ್ಯವಿರುವ ಅನುದಾನ: ಒಟ್ಟು | ಈಗಾಗಲೇ ಮಾರ್ಚ್ 2020 ರಿಂದ ಮೇ 2020ರವರೆಗೆ ಬಿಡುಗಡೆಗೊಳಿಸಿರುವ ಅನುದಾನ | ದಿನಾಂಕ:20.5.2020ರಂದು ಬಿಡುಗಡೆಗೊಳಿಸಿದ ಅನುದಾನ (ಬಾಕಿ ವೇತನ +2020-21ರಲ್ಲಿ ಮೂರು ತಿಂಗಳ ವೇತನಕ್ಕಾಗಿ | ಜೂನ್ 2020 ರಿಂದ ಫೆಬ್ರವರಿ 2021ರವರೆಗಿನ ವೇತನ ವೆಚ್ಚಕ್ಕಾಗಿ ಈಗ ಬಿಡುಗಡೆಗೊಳಿಸಿದ ಅನುದಾನ | ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಿದ ಅನದಾನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಕೋಲಾರ | ಕೆ.ಜಿ.ಎಫ್. | 565074.00 | 753432.00 | 188358.00 | 753432.00 | 565074.00 | 565074.00 |
| 2 | ಬೆಳಗಾವಿ | ಕಿತ್ತೂರು | 376716.00 | 753432.00 | 188358.00 | 565074.00 | 565074.00 | 1130148.00 |
| 3 | ಬೆಳಗಾವಿ | ಕಾಗವಾಡ | 439502.00 | 753432.00 | 188358.00 | 627860.00 | 565074.00 | |
| 4 | ಕಲಬುರ್ಗಿ | ಕಮಲಾಪುರ | 502288.00 | 753432.00 | 188358.00 | 690646.00 | 565074.00 | 1130148.00 |
| 5 | ಕಲಬುರ್ಗಿ | ಶಹಬಾದ್ | 502288.00 | 753432.00 | 188358.00 | 690646.00 | 565074.00 | |
| 6 | ಉಡುಪಿ | ಬೈಂದೂರು | 502288.00 | 753432.00 | 188358.00 | 690646.00 | 565074.00 | 565074.00 |
| 7 | ದಕ್ಷಿಣ ಕನ್ನಡ | ಮೂಡಬಿದರೆ | 502288.00 | 753432.00 | 188358.00 | 690646.00 | 565074.00 | 565074.00 |
| 8 | ಚಿಕ್ಕಮಗಳೂರು | ಅಜ್ಜಂಪುರ | 439502.00 | 753432.00 | 188358.00 | 627860.00 | 565074.00 | 565074.00 |
| 9 | ಹಾವೇರಿ | ರಟ್ಟೀಹಳ್ಳಿ | 439502.00 | 753432.00 | 188358.00 | 627860.00 | 565074.00 | 565074.00 |
| 10 | ರಾಯಚೂರು | ಮಸ್ಕಿ | 188358.00 | 753432.00 | 188358.00 | 376716.00 | 565074.00 | 565074.00 |
| | | | 4457806.00 | 7534320.00 | 1883580.00 | 6341386.00 | 5650740.00 | 5650740.00 |
| | (-) | ಕೆ.ಜಿ.ಎಫ್ | 565074.00 | 753432.00 | 188358.00 | 753432.00 | 565074.00 | 565074.00 |
| | | **ನಿವ್ವಳ** | **3892732.00** | **6780888.00** | **1695222.00** | **5587954.00** | **5085666.00** | **5085666.00** |

ಪ್ರಸ್ತಾವಿತ 9 ತಾಲ್ಲೂಕು ಪಂಚಾಯತಿಗಳ ನಿಧಿ ಲೆಕ್ಕಗಳನ್ನು ಸಂಬಂಧಿಸಿದ ಖಜಾನೆಗಳಲ್ಲಿ ತೆರೆಯದಿರುವ ಕಾರಣ, ಈ ಹಿಂದಿನ ತಾಲ್ಲೂಕುಗಳ ತಾಲ್ಲೂಕು ಪಂಚಾಯತಿಗಳಲ್ಲಿ ಒಂದೇ ಹುದ್ದೆಯಲ್ಲಿ ಹೊಸ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳ ವೇತನವನ್ನು ಅಂದರೆ ಇಬ್ಬರು ಅಧಿಕಾರಿಗಳ ವೇತನವನ್ನು ಸೆಳೆಯಲು ಸಾಧ್ಯವಾಗದ ಕಾರಣ ಹೊಸ ತಾಲ್ಲೂಕು ಪಂಚಾಯತಿಗಳ ನಿಧಿ ಲೆಕ್ಕವನ್ನು ತೆರೆದು, ಕೋಡ್ ಸಂಖ್ಯೆ ನೀಡಿ ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸುವವರೆಗೆ ಅಂದರೆ ಫೆಬ್ರವರಿ 2021ರವರೆಗಿನ ವೇತನ ವೆಚ್ಚಕ್ಕಾಗಿ ಪ್ರಸ್ತಾವಿತ ರೂ.50,85,666.00ಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳಿಗೆ ಲೆಕ್ಕ ಶೀರ್ಷಿಕೆ 2515-00-101-0-28-005ರಡಿ ಹೆಚ್ಚುವರಿ ಒದಗಿಸಿ ಬಿಡುಗಡೆಗೊಳಿಸಲು, ಬಿಡುಗಡೆಗೊಳಿಸಿದ ಈ ಅನುದಾನವನ್ನು

ಹೊಸ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಗಳನ್ನು ಸೂಪರ್ ನ್ಯೂಮರಿ ಹುದ್ದೆಗಳೆಂದು (Supernumery) ಪರಿಗಣಿಸಿ ಹೆಚ್.ಆರ್.ಎಂ.ಎಸ್. ನಲ್ಲಿ ಅಳವಡಿಸಿ ಸೆಳೆಯಲು ಅಧಿಕಾರ ಪ್ರತ್ಯಾಯೋಜಿಸಲು ಹಾಗೂ ಪ್ರಸ್ತಾವಿತ ರೂ.55,87,954.00ಗಳನ್ನು ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ಲೆಕ್ಕ ಶೀರ್ಷಿಕೆ 2515–00–196–1–05–300ರಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆಗೊಳಿಸಿ, ಜಿಲ್ಲಾ ಪಂಚಾಯತಿಗಳು ತಮ್ಮ ನಿಧಿ–2 ಲೆಕ್ಕಕ್ಕೆ ಜಮೆ ಮಾಡಿಕೊಂಡ ನಂತರ ಮರು ಹೊಂದಾಣಿಕೆಯ ಮೂಲಕ ಲೆಕ್ಕ ಶೀರ್ಷಿಕೆ 2515–00–101–0–28–005ಕ್ಕೆ ಒದಗಿಸಿಕೊಂಡು ವೇತನ ವೆಚ್ಚ ಭರಿಸತಕ್ಕದ್ದು.

ಮುಂದುವರೆದು ಇತರೆ ಸಿಬ್ಬಂದಿಯವರುಗಳನ್ನು ಹಾಲಿ ಇರುವ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ನಿಯೋಜಿಸಿದ್ದಲ್ಲಿ ಹೊಸ ತಾಲ್ಲೂಕು ಪಂಚಾಯತಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವವರೆಗೆ ಪ್ರಸ್ತುತ ಇರುವ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ವೇತನ ಸೆಳೆಯಲು ಹಾಗೂ ಹಳೆಯ ತಾಲ್ಲೂಕು ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಿಂದ ವೆಚ್ಚ ಭರಿಸಲು ತಿಳಿಸಿದೆ.

*(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ–2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು. ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು).*

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಪುರುಷೋತ್ತಮ್ ಸೆರಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ), ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ/ಕಲಬುರ್ಗಿ/ಉಡುಪಿ/ದಕ್ಷಿಣ ಕನ್ನಡ/ಚಿಕ್ಕಮಗಳೂರು/ ವಿಜಯಪುರ/ರಾಯಚೂರು
5. ಅಪರ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಕಿತ್ತೂರು/ಕಾಗವಾಡ/ಕಮಲಾಪುರ/ಶಹಾಬಾದ್/ಬೈಂದೂರು/ಮೂಡಬಿದರೆ/ಅಜ್ಜಂಪುರ/ ರಟ್ಟಿಹಳ್ಳಿ/ಮಸ್ಕಿ
7. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾವಿ/ಕಲಬುರ್ಗಿ/ಉಡುಪಿ/ದಕ್ಷಿಣ ಕನ್ನಡ/ಚಿಕ್ಕಮಗಳೂರು/ ವಿಜಯಪುರ/ರಾಯಚೂರು
8. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ